ಆ) ದಿನಾಂಕ ೬-೩-೮೬ರಂದು ಕರ್ನಾಟಕ ರಾಜ್ಯದ ಅರಣ್ಯ ರಕ್ಷಣಾ ದಳದ ಸಿಬ್ಬಂದಿಯವರು ಮುಷ್ಕರ ಹೂಡಿದ್ದಾಗ ಮಾನ್ಯ ಮುಖ್ಯಮಂತ್ರಿಯವರು ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ತಿಳಿಸಿದ ಮೇರೆಗೆ ಅವರ ಈ ಕೆಳಗೆ ವಿವರಿಸಿದ ಪ್ರಮುಖ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿದ್ದು ಅವುಗಳ ಪೈಕಿ ಕೆಲವು ಬೇಡಿಕೆಗಳನ್ನು ಈಡೇರಿಸಲಾಗಿದೆ ಮತ್ತು ಉಳಿದ ಬೇಡಿಕೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

೧. ವಲಯ ಅರಣ್ಯ ಅಧಿಕಾರಿ ಮತ್ತು ಅವರಿಂದ ಕೆಳಗಿನ ವರ್ಗದ ರಕ್ಷಣಾ ಸಿಬ್ಬಂದಿಯವರಿಗೆ ವೇತನ ಪರಿಷ್ಕರಣೆ.

ಕ್ರಮ : ಇದನ್ನು ವೇತನ ಆಯೋಗಕ್ಕೆ ಪರಿಶೀಲನೆ ಬಗ್ಗೆ ಒಪ್ಪಿಸಿದೆ.

೨. ಅರಣ್ಯ ರಕ್ಷಣಾ ಸಿಬ್ಬಂದಿಯವರಿಗೆ ಉಚಿತ ವಸತಿ ಸೌಲಭ್ಯ.

ಕ್ರಮ : ಈ ಹಿಂದೆ ಅರಣ್ಯ ರಕ್ಷಕರಿಗೆ ತಾಲ್ಲೂಕು ಕೆಳಮಟ್ಟದ ಸ್ಥಳಗಳಲ್ಲಿ ಉಚಿತ ವಸತಿ ಸೌಲಭ್ಯವಿದ್ದು ಅದನ್ನು ವನಪಾಲಕರವರಿಗೂ ವಿಸ್ತರಿಸಲಾಗಿದೆ.

೩. ಅರಣ್ಯ ವಲಯಾಧಿಕಾರಿಯವರೆವರೆಗಿನ ಎಲ್ಲಾ ಸಿಬ್ಬಂದಿಯವರಿಗೂ ಉಚಿತ ಸಮವಸ್ತ್ರ ಒದಗಿಸುವ ಕುರಿತು.

ಕ್ರಮ : ವನಪಾಲಕರು ಮತ್ತು ಅವರ ಕೆಳಗಿನ ವರ್ಗದ ಸಿಬ್ಬಂದಿಯವರಿಗೆ ಉಚಿತ ಸಮವಸ್ತ್ರ ಒದಗಿಸುವ ಬಗ್ಗೆ ಆದೇಶ ಹೊರಡಿಸಲಾಗಿದೆ.

೪. ಪೋಲಿಸ್ ಇಲಾಖೆಯಲ್ಲಿರುವಂತೆ ಅರಣ್ಯ ರಕ್ಷಕ ಸಿಬ್ಬಂದಿಯವರಿಗೆ ಸಮವಸ್ತ್ರ ಸ್ವಚ್ಚಗೊಳಿಸುವ ಭತ್ಯೆ ಮಂಜೂರು ಮಾಡುವ ಕುರಿತು.

ಕ್ರಮ : 'ಡಿ' ಗ್ರೂಪ್ ನೌಕರರ ಬಗ್ಗೆ ಆದೇಶ ಹೊರಡಿಸಲಾಗಿದ್ದು ಉಳಿದ 'ಸಿ' ಗ್ರೂಪ್ ನೌಕರರ ಬಗ್ಗೆ ಕೂಡಾ, ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

೫. ಇಲಾಖೆಯ ನೌಕರರಿಗೆ ಸಮಾಧಾನಕರವಾದ ರೀತಿಯಲ್ಲಿ ಬಡ್ತಿ, ಅವಕಾಶ ನೀಡುವ ಬಗ್ಗೆ ಹುದ್ದೆ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ.

ಕ್ರಮ . ಇದು ಈಗ ಸರ್ಕಾರದ ಪರಿಶೀಲನೆಯಲ್ಲಿದೆ ಮತ್ತು ಅಂತಿಮ ಆದೇಶ ಸದ್ಯದಲ್ಲಿಯೇ ಹೊರಡಿಸಲಾಗುವುದು.

೫)ಸಿಬ್ಬಂದಿಗಳು ಮುಷ್ಕರ ಮಾಡುವ ಬಗ್ಗೆ ಸೂಚನೆ ನೀಡಿದ ಕೂಡಲೇ ಪೋಲೀಸ್/ ಇಲಾಖೆಯ ಮುಖ್ಯಸ್ಥರನ್ನು ವಿನಂತಿಸಿ ಅರಣ್ಯ ರಕ್ಷಣೆಗೆ ಪೋಲಿಸರ ಸಹಾಯವನ್ನು ಕೋರಲಾದಂತೆ ಪೋಲೀಸರಿಂದ ಸರ್ವರೀತಿಯಿಂದಲೂ ಸಹಾಯ ಸಿಕ್ಕಿರುತ್ತದೆ. ಇದಲ್ಲದೆ ಗೃಹರಕ್ಷಕ ದಳದವರಿಂಬಲೂ ಅರಣ್ಯ ಪಾಲಕರ ತರಬೇತಿ ಶಾಲೆಯ ವಿದ್ಯಾರ್ಥಿಗಳಿಂದಲೂ, ಗ್ರಾಮಾಣ ಜನರಿಂದಲೂ ಸ್ವಯಂಸೇವಾ ಸಂಸ್ಥೆಗಳ ನೆರವಿನಿಂದಲೂ ಅರಣ್ಯ ಪ್ರೇರಕರ ಮತ್ತು ಇಲಾಖೆಯ ಲಿಪಿಕ ನೌಕರರ ನೆರವಿನಿಂದಲೂ ಅಗತ್ಯಬಿದ್ದಲ್ಲಿ ದಿನಗೂಲಿ ನೌಕರರಿಂದಲೂ. ಇಲಾಖೆಯ ಪತ್ರಾಂಕಿತ ಅಧಿಕಾರಿಯವರು ಅವಶ್ಯಕ ಸೇವೆಯನ್ನು ಅರಣ್ಯ ರಕ್ಷಣೆಯನ್ನು ನೆರವೇರಿಸಿರುತ್ತಾರೆ. ಇದರಿಂದ ಇಲಾಖೆಗೆ ಆಗಬಹುದಾದ ನಷ್ಟವನ್ನು ಕಡಿಮೆ ಮಾಡಿರುತ್ತಾರೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿನ ಉದ್ಯಮಗಳ ಬಗ್ಗೆ

೭೫೦ ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೪-೮೫ರಿಂದ ಈವರೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರತಿ ವರ್ಷಕ್ಕೆ ಎಷ್ಟು ಸಣ್ಣ ಹಾಗೂ ದೊಡ್ಡ ಪ್ರಮಾಣದ ಉದ್ದಿಮೆ ನಿರ್ಮಾಣಕ್ಕೆ ಸರ್ಕಾರದವರ ಸಹಾಯ ದೊರತಿದೆ ಮತ್ತು ಸರ್ಕಾರಿ ಉದ್ದಿಮೆ ಏನಾದರೂ ಪ್ರಾರಂಭವಾಗಿದೆಯೇ;

ಅ) ಉಳಿದ ಯಾವ ಜಿಲ್ಲೆಗಳಲ್ಲಿ ಸರ್ಕಾರಿ ಸ್ವಾಮ್ಯದ ದೊಡ್ಡ ಉದ್ದಿಮೆಯಂಯನ್ನು ೧೯೪೪ರಿಂದ ಈಚೆಗೆ ಪ್ರಾರಂಭಿಸಲಾಗಿದೆ;

ಇ) ಉತ್ತರ ಕನ್ನಡ ಜಿಲ್ಲೆ ಉದ್ದಿಮೆಯ ದೃಷ್ಟಿಯಿಂದ ಹಿಂದುಳಿದ ಜಿಲ್ಲೆಯಾಗಿದೆಯೇ, ಹಾಗಿದ್ದಲ್ಲಿ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಏನಾದರೂ ವಿಶೇಷ ಕ್ರಮ ಕೈಗೊಳ್ಳಲಿದ್ದಾರೆಯೇ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

	೧೯೪೪–೪೫	೧೯೪೫–೪೬	೪೬–೪೭
			೩೧/೧೦–೧೯೪೭
ಅ) ಸಣ್ಣ ಪ್ರಮಾಣದ ಉದ್ದಿಮೆ	೧೯೧	೧೯೧	೧೭೧
ಮಧ್ಯಮ ಪ್ರಮಾಣದ ಉದ್ದಿಮೆ	೨	–	–
ದೊಡ್ಡ ಪ್ರಮಾಣದ ಉದ್ದಿಮೆ	ಇಲ್ಲ	–	–

ಆ) ಯಾವುದೂ ಇಲ್ಲ.

ಇ) ಜಿಲ್ಲೆಯನ್ನು ಕೈಗಾರಿಕಾ ಕ್ಷೇತ್ರದಲ್ಲಿ ಹಿಂದುಳಿದ ಜಿಲ್ಲೆಯೆಂದು ಘೋಷಿಸಲಾಗಿದೆ ಉದ್ದಿಮೆದಾರರಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಸಹಾಯ ಧನವನ್ನು ಹಾಗೂ ಇನ್ನಿತರ ಸೌಲಭ್ಯಗಳನ್ನು ಕೊಡಲಾಗುತ್ತಿದೆ.

ನಂಜನಗೂಡಿನಲ್ಲಿ ಎಷ್ಟು ಕೈಗಾರಿಕೆಗಳಿಗೆ ಲೈಸೆನ್ಸ್ ನೀಡಲಾಗಿದೆ.

೭೭೩ ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಂಜನಗೂಡನ್ನು ಕೈಗಾರಿಕೆ ಪ್ರದೇಶವೆಂದು ಸರ್ಕಾರ ಘೋಷಿಸಿದ ಮೇಲೆ ಇದುವರೆಗೆ ಎಷ್ಟು ಕೈಗಾರಿಕೆಗಳಿಗೆ ಪರವಾನಿಗೆ ನೀಡಲಾಗಿದೆ;

ಆ) ಪರವಾನಿಗೆ ನೀಡಲಾಗಿರುವ ಕೈಗಾರಿಕಾ ಘಟಕಗಳ ಹೆಸರುಗಳೇನು? ಹಾಗೂ ಯಾವ ಯಾವ ಪಸ್ತುಗಳನ್ನು ಉತ್ಪತ್ತಿ ಮಾಡಲಿವೆ;

ಇ) ಪ್ರತಿಯೊಂದು ಕೈಗಾರಿಕೆಗಳು ಹೂಡಿರುವ ಹಣವೆಷ್ಟು?

ಈ) ಈ ಪ್ರತಿಯೊಂದು ಕೈಗಾರಿಕೆಯಿಂದ ಎಷ್ಟು ಜನರಿಗೆ ಕೆಲಸ ದೊರೆತಿದೆ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ೧೮

ಆ) ಇ) ಮತ್ತು ಈ) ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.